UASB Library
Newspaper Clippings
Wednesday 18-05-2022 Pg .1
Jai Kisan

ಕೃಷಿ ವಾಣಿಜ್ಯ

skeditorkv@gmail.com

18-05-2022 Sk Pg 10

ಜ್ಯೋತಿ ಬೆಳಗಿಸಿದ ಮಿಶ್ರ ಕೃಷಿ



■ ಸುಧೀರ ಕುಂಭೋಜಕರ

ಬೆಳೆ ವೈವಿಧ್ಯತೆಯಲ್ಲಿ ನಮ್ಮ ರಾಜ್ಯಕ್ಕೆ ವಿಶೇಷ ಸ್ಥಾನಮಾನವಿದೆ. ಮುಖ್ಯ ಬೆಳೆಯ ಜೊತೆಗೆ ಅಂತರ ಬೆಳೆ ಅಥವಾ ಮಿಶ್ರ ಕೃಷಿ ಮಾಡಬೇಕೆಂದು ಕೃಷಿ ತಜ್ಞರು ಲಾಗಾಯ್ತಿನಿಂದಲೂ ಸಲಹೆ ನೀಡುತ್ತ ಬಂದಿದ್ದಾರೆ. ರಾಜ್ಯದ ರೈತರು ಕೂಡ ಈ ವಿಷಯದಲ್ಲಿ ಪ್ರಯೋಗ ಮಾಡಿ ಯಶಸ್ವಿಯಾಗಿದ್ದಾರೆ. ಅಂಥವರಲ್ಲಿ ಚಿಕ್ಕೋಡಿ ತಾಲೂಕಿನ ಕೇರೂರ ಗ್ರಾಮದ ಜ್ಯೋತಿ ಮಲ್ಲಪ್ಪ ಮಾಳಿ ಕೂಡ ಒಬ್ಬರು.

ಮಸಾರಿ ಭೂಮಿಯಲ್ಲಿ ಪೇರಲ ಮತ್ತು ಮಾವು ಬೆಳೆಗಳ ಮಧ್ಯೆ ಮಿಶ್ರ ಬೆಳೆಯಾಗಿ ಹೂ ಮತ್ತು ತರಕಾರಿ ಬೆಳೆದು ಪ್ರತಿ ವರ್ಷ ಲಕ್ಷ ಲಕ್ಷ ಹಣ ಎಣಿಸುತ್ತಿದ್ದಾರೆ. ಸಾಂಪ್ರದಾಯಿಕವಾಗಿ ಕಬ್ಬು ಬೆಳೆಯುತ್ತಿದ್ದ ಜ್ಯೋತಿ ಅವರಿಗೆ ಅದರಿಂದ ಹೆಚ್ಚಿನ ಆದಾಯ ಲಭಿಸಿಲ್ಲ. ಪರ್ಯಾಯವಾಗಿ ಪೇರಲ ಮತ್ತು ಮಾವು ಬೆಳೆದಿದ್ದಾರೆ. ಕಳೆದ ಎರಡು ವರ್ಷಗಳ ಆಚೆ 300 ಸಸಿ ಪೇರಲ ಮತ್ತು 400 ಸಸಿ ಮಾವು ನಾಟಿ ಮಾಡಿದ್ದು, ನಾಟಿ ಮಾಡಿದ 9ನೇ ತಿಂಗಳಿನಲ್ಲಿಯೇ ಪೇರಲ ಕಟಾವು ಆಗಿದೆ. ಈ ವರ್ಷ ಮಾವು ಕೂಡ ಫಲ ನೀಡಿದ್ದು, ಆದರೆ ನಿರೀಕ್ಷಿತ ಮಟ್ಟದಲ್ಲಿ ಇಲ್ಲ. ಮುಂದಿನ ವರ್ಷದಿಂದ ಮಾವೂ ಕೂಡ ಆದಾಯ ನೀಡಲಿದೆ ಎಂದು ಹೇಳುತ್ತಾರೆ.

ಭರಪೂರ ಆದಾಯ

ಒಂದುವರೆ ಎಕರೆ ಭೂಮಿಯಲ್ಲಿ ಬೆಳೆದಿರುವ ಮಾವು ಮತ್ತು ಪೇರಲ ಗಿಡಗಳ ಮಧ್ಯೆ ಋತುಮಾನದ ಪ್ರಕಾರ ಚೆಂಡು ಹೂವು ಮತ್ತು ಆಸ್ಟರ್ ಪುಷ್ಪಗಳನ್ನು ಬೆಳೆಯುತ್ತಾರೆ. ಹೂವಿನ ಗಿಡಗಳು ತೆರವಾದ ನಂತರ ಬಗೆ ಬಗೆಯ ತರಕಾರಿ ಮತ್ತು ಸೊಪ್ಪುಗಳನ್ನು ಬೆಳೆಯುತ್ತಾರೆ.

ಒಂದು ಎಕರೆ ಮಸಾರಿ ಭೂಮಿಯಲ್ಲಿ ಗರಿಷ್ಠ 50 ಟನ್ ಕಬ್ಬು ಬೆಳೆಯುತ್ತದೆ. ಟನ್‌ಗೆ ಮೂರು ಸಾವಿರ ದರ ನೀಡಿದರೂ 1.5 ಲಕ್ಷ ಆದಾಯವಾಗುತ್ತದೆ. ಅದರಲ್ಲಿ ಕಬ್ಬು ಬೆಳೆಯಲು ಸುಮಾರು 50 ಸಾವಿರ ಖರ್ಚಾಗುತ್ತದೆ. ಒಂದು ವರ್ಷಕ್ಕೆ ಒಂದು ಎಕರೆಯಲ್ಲಿ ಕೇವಲ ಒಂದು ಲಕ್ಷ ಆದಾಯ ಕೈ ಸೇರುತ್ತದೆ. ಈಗ ನಾವು ಪೇರಲ ಬೆಳೆದಿದ್ದು, ನಾಟಿ ಮಾಡಿದ ಒಂಬತ್ತನೇ ತಿಂಗಳಿನಿಂದ ಫಲ ಕಟಾವು ಆರಂಭಗೊಂಡಿದೆ. ಒಂದು ಬಾರಿ ಕನಿಷ್ಠ 45 ಸಾವಿರ ಆದಾಯ ಬರುತ್ತದೆ. ವರ್ಷದಲ್ಲಿ ಮೂರು ಬಾರಿ ಹಣ್ಣು ಕಟಾವು ಮಾಡುತ್ತೇವೆ. ಪೇರಲ ಬೆಳೆಯಿಂದಲೇ ವರ್ಷಕ್ಕೆ ಖರ್ಚು ವೆಚ್ಚ ಕಳೆದು ಒಂದು ಲಕ್ಷ ಆದಾಯ ಕೈಸೇರುತ್ತದೆ ಎನ್ನುತ್ತಾರೆ ಜ್ಯೋತಿ ಮಾಳಿ.

ಪೇರಲ ಮತ್ತು ಮಾವು ಬೆಳೆಗಳ ಸುತ್ತ ಮತ್ತು ಸುಮಾರು 10 ಗುಂಟೆ ಭೂಮಿಯಲ್ಲಿ 1300 ಕರಿಬೇವು ಸಸಿಗಳನ್ನು ನಾಟಿ ಮಾಡಿದ್ದು, ವರ್ಷದಲ್ಲಿ ಅದೂ 3 ಬಾರಿ ಕಟಾವು ಆಗುತ್ತದೆ. ಸರಾಸರಿ ರೂ. 45 ರಿಂದ 100 ಗಳಿಗೆ ಪ್ರತಿ ಕೆ.ಜಿ. ಕರಿಬೇವು ಮಾರಾಟ ಆಗುತ್ತದೆ. ಕರಿಬೇವು, ಪೇರಲ ಮತ್ತು ಮಾವು ಗಿಡಗಳ ಮಧ್ಯೆ ವಿವಿಧ ಬಗೆಯ ತರಕಾರಿ ಮತ್ತು ಸೊಪ್ಪು ಗಳನ್ನೂ ಬೆಳೆಯು ತ್ತೇನೆ. ಆದರಿಂದಲೇ ವರ್ಷ ವೊಂದರಲ್ಲಿ ಕನಿಷ್ಠ 2 ಲಕ್ಷ ರೂ ಆದಾಯ ದೊರಕುತ್ತದೆ ಎಂದು ಹೇಳುತ್ತಾರೆ.

ವಿಶೇಷವೆಂದರೆ ಜ್ಯೋತಿ ಮಾಳಿ ಅವರು ಯಾವುದೇ ಮಾರುಕಟ್ಟೆಗೆ ಬೆಳೆಯನ್ನು ದಲ್ಲಾಳಿಗಳ ಮೂಲಕ ಮಾರಾಟ ಮಾಡುವುದಿಲ್ಲ. ತಾವೇ ಖುದ್ದಾಗಿ ಸುತ್ತಮುತ್ತಲಿನ ಪಟ್ಟಣ ಮತ್ತು ಗ್ರಾಮಗಳಲ್ಲಿ ನಡೆಯುವ ಸಂತೆಗಳಲ್ಲಿ ಮಾರಾಟ ಮಾಡುತ್ತಾರೆ. ಇದರಿಂದ ತಮಗೆ ಹೆಚ್ಚಿನ ಲಾಭ ದೊರಕುತ್ತದೆ ಎಂದು ಅನುಭವ ಹಂಚಿಕೊಳ್ಳುತ್ತಾರೆ. ಜ್ಯೋತಿ ಮಾಳಿ ಅವರ ಕೃಷಿ ಸಾಧನೆಯನ್ನು ಗುರುತಿಸಿ ಕೃಷಿ ಇಲಾಖೆಯು ತಾಲ್ಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿ ನೀಡಿದೆ.

ಜಿಎಸ್‌ಟಿ ಸಂಗ್ರಹ ಮಿಂಚಿನ ಸಂಚಾರ

ಪ್ರಸಕ್ತ ಸಾಲಿನ ಏಪ್ರಿಲ್ ತಿಂಗಳಿನಲ್ಲಿ 1.68 ಲಕ್ಷ ಕೋಟಿ ರೂ ಜಿಎಸ್‌ಟಿ ಸಂಗ್ರಹವಾಗಿ ಸರ್ವಕಾಲಿಕ ದಾಖಲೆ ನಿರ್ಮಿಸಿದೆ. ಮಾರ್ಚ್ ತಿಂಗಳಿನಲ್ಲಿ ಇದು 1.42 ಲಕ್ಷ ಕೋಟಿ ರೂದಷ್ಟಾಗಿತ್ತು. ಮಾಹಿತಿ ತಂತ್ರಜ್ಞಾನದ ಸಮರ್ಪಕ ಬಳಕೆ ಹಾಗೂ ತೆರಿಗೆಗಳ್ಳತನ ವಿರುದ್ಧ ಕಠಿಣ ಕ್ರಮ ಕೈಗೊಂಡಿದ್ದರಿಂದ ಇಷ್ಟು ಭಾರೀ ಪ್ರಮಾಣದ ಸಂಗ್ರಹ ಸಾಧ್ಯವಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ತಿಳಿಸಿದೆ.

ಎ.20ರಂದು ಒಂದೇ ದಿನದಲ್ಲೇ 9.58 ಲಕ್ಷ ವ್ಯವಹಾರಗಳ ಮೂಲಕ 57,847 ಕೋಟಿ ರೂ ಜಿಎಸ್‌ಟಿ ಸಂಗ್ರಹವಾಗಿ ಎಲ್ಲರೂ ಮೂಗಿನ ಮೇಲೆ ಬೆರಳಿಡುವಂತೆ ಮಾಡಿದೆ. ಆದರೆ ಕೆಲವರು ಇದನ್ನು ನಂಬಲು ತಯಾರಿಲ್ಲ. ಹಣದುಬ್ಬರ ಹಾಗೂ ಹೆಚ್ಚು ಆಮದು ವಹಿವಾಟು ಈ ದಾಖಲೆಗೆ ಕಾರಣ ಎಂದು ಕೆಲವು ಆರ್ಥಿಕ ತಜ್ಞರು ವಾದಿಸಿದರೆ ಇನ್ನೂ ಕೆಲವರು ಹೆಚ್ಚಿದ ಆರ್ಥಿಕ ಚಟುವಟಿಕೆ ಹಾಗೂ ತೆರಿಗೆ ಸಲ್ಲಿಕೆ ಪ್ರಮಾಣ ಜಾಸ್ತಿಯಾಗಿರುವುದೇ ಇದಕ್ಕೆ ಕಾರಣ ಎಂದು ಹೇಳುತ್ತಾರೆ.

ಹೆಚ್ಚಳಕ್ಕೆ ಕಾರಣವೇನು...?

ಕೈಗಾರಿಕಾ ಬೆಳವಣಿಗೆಯಲ್ಲಿ ಮುಂದುವರಿದ ದೇಶದ ಪ್ರಮುಖ 10 ರಾಜ್ಯಗಳು ಜಿಎಸ್‌ಟಿ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಿವೆ. ಉದಾಹರಣೆಗೆ 2021ನೇ ಸಾಲಿನ ಏಪ್ರಿಲ್‌ಗೆ ಹೋಲಿಸಿದರೆ ಪ್ರಸಕ್ತ ಏಪ್ರಿಲ್‌ನಲ್ಲಿ ಜಿಎಸ್‌ಟಿ ಸಂಗ್ರಹ ಮಹಾರಾಷ್ಟ್ರದಲ್ಲಿ ಶೇ.24.9, ಕರ್ನಾಟಕದಲ್ಲಿ ಶೇ.18.7, ಓರಿಸ್ಸಾದಲ್ಲಿ ಶೇ.27.5, ಹರ್ಯಾಣಾದಲ್ಲಿ ಶೇ.23.1 ಹಾಗೂ ಗುಜರಾತ್‌ನಲ್ಲಿ ಶೇ.16.9ರಷ್ಟು ವೃದ್ಧಿಯಾಗಿದೆ. ಇನ್ನು ಜಿಎಸ್‌ಟಿ ವ್ಯವಸ್ಥೆಯಲ್ಲಿ ಇ-ಇನ್ವಾಯ್ಸ್ ಪರಿಚಯಿಸಿದ ನಂತರ ತೆರಿಗೆ ಕಂಪ್ಲಾಯನ್ಸ್ ಮಟ್ಟದಲ್ಲೂ ಸಾಕಷ್ಟು ಸುಧಾರಣೆಯಾಗಿದೆ. ಅತ್ಯಧಿಕ ಸಂಖ್ಯೆಯಲ್ಲಿ ತೆರಿಗೆದಾರರು ಜಿಎಸ್‌ಟಿಆರ್-1 ಹಾಗೂ ಜಿಎಸ್‌ಟಿಆರ್-3ಬಿ ರಿಟರ್ನ್ಸ್ ಸಲ್ಲಿಕೆ ಮಾಡಿದ್ದಾರೆ. ಏಪ್ರಿಲ್‌ನಲ್ಲಿ ಜಿಎಸ್‌ಟಿಆರ್-3ಬಿ ಶೇ.84.7 ಹಾಗೂ ಜಿಎಸ್‌ಟಿಆರ್-1 ಶೇ.83.11ರಷ್ಟು ಹೆಚ್ಚಳವಾಗಿದೆ. ಕಳೆದ ಸಾಲಿನ ಏಪ್ರಿಲ್‌ದಲ್ಲಿ ಅನುಕ್ರಮವಾಗಿ ಶೇ.78.3 ಹಾಗೂ ಶೇ.73.9ರಷ್ಟಾಗಿತ್ತು. ಸರಕುಗಳ ಇನ್‌ವಾಯ್ಸ್ ಅಪ್‌ಲೋಡ್ ಮಾಡುವದನ್ನು ಕಡ್ಡಾಯಗೊಳಿಸಿದ ನಂತರ ಜಿಎಸ್‌ಟಿ ಸಲ್ಲಿಕೆಯಲ್ಲಿನ ಸೋರಿಕೆ ತಡೆಗಟ್ಟಲು ಸಾಧ್ಯವಾಗಿದ್ದು, ತೆರಿಗೆ ಅವ್ಯವಹಾರಕ್ಕೆ ಕಡಿವಾಣ ಹಾಕಿದಂತಾಗಿದೆ. ಹೀಗಾಗಿ ಜಿಎಸ್‌ಟಿ ಸಂಗ್ರಹಣೆ ತಿಂಗಳಿನಿಂದ ತಿಂಗಳಿಗೆ ಹೆಚ್ಚುತ್ತಾ ದಾಖಲೆ ನಿರ್ಮಿಸತೊಡಗಿದೆ.

Changes to biodiversity law will weaken it: Jairam Ramesh

Parliamentary panel member flags exemption given to AYUSH practitioners

SOBHANA K. NAIR
NEW DELHI

Senior Congress leader Jairam Ramesh has expressed concern over the Biological Diversity (Amendment) Bill, 2021, which is in the final stages of consultations in the Joint Parliamentary Committee. He questioned the exemption given to AYUSH practitioners from the provisions of the law.

Mr. Ramesh, who is a member of the committee, in a letter addressed to other members and committee chairperson and BJP MP Sanjay Jaiswal, said that this exemption could open the law for abuse. The law was introduced in Parliament on December 16 last year by Union Environment Minister Bhupender Yadav, and was referred to the Joint Parliamentary Committee on December 20. The Bill amends the Biological Diversity Act, 2002 to simplify compliance requirements for domestic companies.



The Biodiversity Bill makes a distinction between cultivated medicinal plants and forest-based plants. ▪ SPECIAL ARRANGEMENT

Flagging the presentation made by the Environment Ministry last month before the committee, Mr. Ramesh said, "The Ministry is drawing a distinction between a registered AYUSH (Ayurveda, Yoga and Naturopathy, Unani, Siddha and Homeopathy) practitioner and a company, and exempting the former from the Act. This is an artificial distinction since the registered AYUSH practitioner may well be having informal links with a collective [family or otherwise], which may or may not have a company structure. This may well open doors for large-scale exemptions."

The government brought in the amended Bill because of the push from many AYUSH companies. In 2016, the Uttarakhand Biodiversity Board sent a notice to Divya Pharmacy run by Swami Ramdev and Acharya Balkrishna, stating that it violated the Biodiversity Act for using biological resources from the State for its ayurvedic formulations, without intimating the Board and that it was liable to pay an access and benefit-sharing fee. The company had unsuccessfully challenged the Board's notice.

Mr. Ramesh also sounded an alarm on the distinction made in the law between cultivated biodiversity and forest-based biodiversity.

"It is not at all clear what the basis for this distinction will be and whether it can be sustained in practice," he added. Multiple provisions of the Bill, he said, are aimed at diluting the authority of the National Biodiversity Authority (NBA).

The appointment of 16 ex-officio officers of the Government of India is one such, Mr. Ramesh said.

"The Ministry says NBA approval is required only at the time of commercialisation of a patent and not at the time of application for a patent. This is something that has very far-reaching implications and I can tell you that what will happen is that NBA approval at the time of commercialisation will be reduced to a formality and will become a *fait accompli*," he wrote.

Assam farmer on a mission to save orchids

SUMIR KARMAKAR
GUWAHATI, DHNS

Mithu Gogoi has been fond of orchids since his school days. His garden is awash in a rainbow of hues in the spring, from white to yellow to pink to red to orange.

Mithu was perturbed when his father threw away some orchids while clearing a grove for tea cultivation about two decades ago. The plants included Kopou, Assam's state flower, an integral part of the state's most significant annual cultural festival, Rongali Bihu. That's when Gogoi decided to "rescue" orchids from the destruction of forests, and it became a passion for him since then.

The 53-year-old farmer, at present, has 9,000 plants of 217 species of orchids in his house garden.

"During the Bihu, we see how people struggle to collect the Kopou. It is only around this time when people express concern over the disappearance of the plant...," Gogoi told *DH* over the phone.

Farming is his means of livelihood, but Gogoi has also seriously pursued his passion over the years to protect the Kopou from becoming extinct. He has "rescued" nearly 500 orchid plants from trees and forests felled for the widening of the highways, construction of new roads, industries or following storms.

Kopou or foxtail orchid (Rhynchostylis retusa) is an integral part of Rongali Bihu celebrations as Assamese women decorate their hair for Bihu dance. Foxtail orchids grow naturally in Assam's forests, but the destruction of jungles and changing climate have posed a threat to them.

In 2018, Gogoi, a graduate in geography, formed the All Assam Orchid Society at Sivasagar college, through which he encourages youths to similarly "rescue" orchids, particularly Kopou. "I want every Assamese house to have at least one Kopou plant to protect our state flower from going extinct. It is part of our culture and life, and we must preserve it...," Gogoi said.

Although it is illegal to grow some species of the orchids at home, Gogoi says he has made sure to grow the permitted ones. "I just love the orchids, particularly the Kopou. So many visitors come to me during Bihu to see and enjoy the beauty in my Kopou garden...," he said.



Foxtail orchid

- Kopou (Rhynchostylis retusa) or foxtail orchid is the state flower of Assam.
- It is an integral part of Rongali Bihu celebrations as Assamese women decorate their hair for the Bihu dance with the flower.
- Assam has 300 species of orchids.
- Nearly 1,300 species of orchids are found across India, of which 900 are found in the Northeast.
- Destruction of jungles, jhum cultivation (slash and burn practice on the hills) and climate change are the main threats to orchids.

Govt Relaxes Wheat Export Ban, Allows 1.67 L tonnes to Be Loaded

Traders expect 8 lakh tonne to be exported post ban, say it's not enough to clear the stranded trucks

Jayashree.Bhosale
@timesgroup.com

Pune: The Directorate General of Foreign Trade (DGFT) on Tuesday allowed 1,67,211 tonnes of wheat to be loaded on four partially loaded vessels at Kandla port after the department of commerce partially relaxed the ban on exports earlier in the day.

Traders say the relaxations in the May 13 order banning the export of wheat is likely to allow 400,000-500,000 tonnes of grain stranded at the ports to be shipped out quickly.

They expect at most another 300,000 tonnes of wheat to be exported under the exemption provided by the government to quantities already contracted against a letter of credit (LC), which will take the total export to about 800,000 tonnes after the ban.

The four vessels allowed additional wheat already had 80,368 tonnes loaded before the ban on May 13. MV XIN YI HAI will carry 55,000 tonnes to Brazil; MV JAG RADHA 57,000 tonnes to Bangladesh; MV VALLIANT SUMMER 66,000 tonnes to Oman; and MV PHAEDRA 69,579 tonnes to Indonesia.

They say this is not enough to clear all the trucks stranded at ports or warehouses and have sought government intervention, adding that exports were contracted on cash against delivery basis.

According to trade estimates, only 20-25% of the total wheat export contracts are expected to have been signed against the LCs.

Grain Drain!

7.85 mt wheat exported in 2021-22, **275%** up from a year ago

This was due to Ukraine-Russia conflict

India has set target of exporting **10 mt** wheat in 2022-23

Plans to reduce govt procurement



Wheat exports were banned on May 13; **6.1 mt** wheat replaced with rice in NFSA

The ban has been relaxed partially

Some more concessions are expected in coming days

18-05-2022
Eco Time Pg 14

For more information visit
University Library Website
Web - uasbagrilibindia.org
E-mail- librarian@uasbangalore.edu.in

18-05-2022
Hindu Pg 08

ದೇಶಾದ್ಯಂತ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ, ಗೋಧಿ ರಫ್ತಿನ ಮೇಲೆ ನಿಷೇಧ ಹೇರಿದೆ. ಭಾರತದ ಈ ಕ್ರಮದಿಂದಾಗಿ ಜಗತ್ತಿನ ಹಲವಾರು ದೇಶಗಳು ಕಳವಳಕ್ಕೀಡಾಗಿವೆ. ಜಗತ್ತಿನ ಇಡೀ ಆಹಾರ ಪೂರೈಕೆ ಪ್ರಕ್ರಿಯೆ ಮೇಲೆಯೇ ಹೊಡೆತ ಬೀಳಬಹುದು ಎಂದು ಆತಂಕ ವ್ಯಕ್ತ ಪಡಿಸಿವೆ. ಹಾಗೆಯೇ ಜಿ7 ದೇಶಗಳೂ ಭಾರತದ ಕ್ರಮವನ್ನು ಟೀಕಿಸಿವೆ. ಹಾಗಾದರೆ, ಭಾರತದ ಮೇಲೇಕೆ ಇಷ್ಟೊಂದು ಅವಲಂಬನೆ? ಈ ಬಗ್ಗೆ ಒಂದು ನೋಟ ಇಲ್ಲಿದೆ.

ನ್ಯೂಸ್ ಕೆಫೆ

ಗೋಧಿ ರಫ್ತಿಗೆ ನಿಷೇಧ ಏಕೆ?

■ ರಫ್ತು ನಿಷೇಧ ಮಾಡಿದ್ದು ಏಕೆ?

ಉಕ್ರೇನ್ ಮೇಲಿನ ರಷ್ಯಾ ಆಕ್ರಮಣ ಸೇರಿದಂತೆ ಬೇರೆ ಬೇರೆ ಕಾರಣಗಳಿಂದಾಗಿ ದೇಶೀಯವಾಗಿ ಎಲ್ಲಾ ಅಗತ್ಯ ವಸ್ತುಗಳ ದರ ಏರಿಕೆಯಾಗಿದೆ. ಅದರಂತೆ ದೇಶೀಯ ಮಾರುಕಟ್ಟೆಯಲ್ಲಿ ಗೋಧಿ ಬೆಲೆಯೂ ಹೆಚ್ಚಾಗಿದೆ. ಅಂದರೆ, ವಾಣಿಜ್ಯ ಇಲಾಖೆ ಕಾರ್ಯದರ್ಶಿ ಪ್ರಕಾರ ಶೇ. 20ರಿಂದ ಶೇ.40ರಷ್ಟು ಹೆಚ್ಚಾಗಿದೆ. ಹಾಗೆಯೇ ಪಡಿತರ ರೂಪದಲ್ಲಿಯೂ ಉಚಿತವಾಗಿ ಗೋಧಿ ನೀಡಬೇಕಾಗಿದೆ. ಹೀಗಾಗಿ, ಗೋಧಿ ಮೇಲೆ ರಫ್ತು ಹೇರಲಾಗಿದೆ. ಅಲ್ಲದೆ, ಒಂದು ವೇಳೆ ಕಡಿಮೆ ಉತ್ಪಾದನೆಯಾದರೆ, ಭಾರತದ 140 ಕೋಟಿ ಜನರಿಗೆ ಆಹಾರ ಭದ್ರತೆ ಒದಗಿಸುವ ಕಾರಣದಿಂದಾಗಿ ರಫ್ತಿನ ಮೇಲೆ ನಿಷೇಧ ಹೇರಿದೆ.

■ ಜಾಗತಿಕವಾಗಿ ಏನು ಪರಿಣಾಮ?

ಭಾರತದಿಂದ ಪ್ರಮುಖವಾಗಿ ಬಾಂಗ್ಲಾದೇಶ, ಇಂಡೋನೇಶಿಯಾ, ನೇಪಾಳ, ಟರ್ಕಿ ಮತ್ತು ಈಜಿಪ್ಟ್‌ಗೆ ಗೋಧಿಯನ್ನು ರಫ್ತು ಮಾಡಲಾಗುತ್ತಿದೆ. ಅಂತಾರಾಷ್ಟ್ರೀಯವಾಗಿ ಗೋಧಿ ರಫ್ತು ನಿಷೇಧ ಮಾಡಿದ್ದರೂ, ಹಿಂದಿನಿಂದಲೂ ಖರೀದಿ ಮಾಡಿಕೊಂಡು ಬಂದಿರುವ ಮತ್ತು ಈಗಾಗಲೇ ಒಪ್ಪಂದ ಮಾಡಿಕೊಂಡಿರುವ ರಾಷ್ಟ್ರಗಳಿಗೆ ಗೋಧಿ ಪೂರೈಸುವುದಾಗಿ ಭಾರತ ಹೇಳಿದೆ.

■ ಬಿಸಿಗಾಳಿಯಿಂದ ಆದ್ದಪರಿಣಾಮ

ಇಡೀ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಗೋಧಿ ಬೆಳೆಯುವ ದೇಶಗಳ ಪೈಕಿ ಭಾರತ 2ನೇ ಸ್ಥಾನದಲ್ಲಿದೆ. ಚೀನಾಗೆ ಮೊದಲ ಸ್ಥಾನ. ಕಳೆದ ಐದು ವರ್ಷಗಳ ಋತುಗಳಲ್ಲಿ ಭಾರತದಲ್ಲಿ ಗೋಧಿ ಉತ್ಪಾದನೆ ಹೆಚ್ಚಳವಾಗಿತ್ತು. ಹೀಗಾಗಿ, ಈ ವರ್ಷ 12 ಮಿಲಿಯನ್ ಟನ್ ಗೋಧಿಯನ್ನು ರಫ್ತು ಮಾಡಲು ಭಾರತ ಚಿಂತನೆ ಹಾಕಿಕೊಂಡಿತ್ತು. ಆದರೆ, ಇತ್ತೀಚೆಗೆ ಉತ್ತರ ಭಾರತದಲ್ಲಿ ಭಾರೀ ಬಿಸಿಹವೆ ಕಾಣಿಸಿಕೊಂಡಿರುವುದರಿಂದ ಗೋಧಿ ಬೆಳೆಯ ಉತ್ಪಾದನೆ ಕಡಿಮೆಯಾಗುವ ಸಾಧ್ಯತೆ ಇದೆ.



■ ಸಾಗಣೆ ಕಷ್ಟ

ಜಗತ್ತಿನ ಹೆಚ್ಚು ಗೋಧಿ ರಫ್ತುದಾರರೆಂದರೆ ರಷ್ಯಾ, ಐರೋಪ್ಯ ಒಕ್ಕೂಟ, ಆಸ್ಟ್ರೇಲಿಯ, ಕೆನಡಾ ಮತ್ತು ಅಮೆರಿಕ. ಇವರು ಜಗತ್ತಿಗೆ ಬೇಕಾದ ಶೇ.60ರಷ್ಟು ಗೋಧಿಯನ್ನು ರಫ್ತು ಮಾಡುತ್ತವೆ. ಆದರೆ, ಈ ಬಾರಿ ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಮಾಡಿರುವುದರಿಂದ ಕಪ್ಪು ಸಮುದ್ರ ಸೇರಿ ಕೆಲವೆಡೆ ಸಾಗಣೆಗೆ ಅಡಚಣೆಯಾಗಿದೆ. ಹೀಗಾಗಿ, ಭಾರತದ ಮೇಲೆ ಬೇರೆ ಬೇರೆ ದೇಶಗಳು ಹೆಚ್ಚು ಅವಲಂಬಿತವಾಗಿವೆ.

G-7 likely to increase pressure to reverse wheat export ban

India to participate in high-level meeting on food security

SUHASINI HAIDAR
KALLOL BHATTACHERJEE
NEW DELHI

Members of the G-7 countries are expected to appeal to India to reverse the ban on wheat exports during the upcoming G-7 summit (June 26-28) in Germany which is likely to be attended by Prime Minister Narendra Modi.

The information about the G-7's stance towards the ban of wheat exports came as India sent Minister of State for External Affairs V. Muralidharan to participate in a high-level ministerial meeting in New York on "Global food security - call to action". Sources have told *The Hindu* that as the future G-20 chair, India has important responsibilities to ensure food security, especially in the backdrop of the Ukraine crisis that has disrupted global agriculture supply network.

The issue of India's wheat export ban is likely to dominate at the global food security meeting which will be hosted by U.S. Secretary of State Antony Blinken on Wednesday at the UN.



Sacks of wheat at APMC Wholesale Market in Ahmedabad. ▪ VIJAY SONEJI

The mood at the UN Security Council was conveyed by the U.S. envoy to the UN Ambassador Linda Thomas-Greenfield who said the U.S. is asking other countries to avoid stopping wheat exports and added, "India will be one of the countries participating in our meeting at the Security Council, and we hope that they can, as they hear the concerns being raised by other countries, that they would reconsider that position".

The consultation between India and the G-7 countries will continue in the run-up to the summit in Germany. Dammu Ravi, Secretary of the Ministry of External Affairs, will participate in the G-7 development ministers meeting on Wednesday in Berlin where the issue of food security is expected to dominate. The meeting is likely to produce a proposal, but India may not endorse the document. The hint of the coming pressure from the G-7 was felt by the Indian side during the recently concluded Prime Ministerial visit to Germany, Denmark and France when the talks with the counterparts were "dominated" by the Ukraine crisis.

18-05-2022
Uv Pg 06